ರಾತ್ರಿ ಅಲ್ಲಿ ವಾಸಿಸುವವರ ಬಗ್ಗೆ ಯಾವುದೇ ಪುನರ್‌ವಸತಿ ಯೋಜನೆಯನ್ನು ಮಾಡದೆ ಕೆಲಸ ಪ್ರಾರಂಭ ಮಾಡುವುದಕ್ಕೆ ತೆಗೆದುಕೊಂಡಿರುವುದನ್ನು ನೋಡಿದರೆ ಅಲ್ಲಿ ವಾಸಿಸುವವರಿಗೆ ತುಂಬಾ ತೊಂದರೆ ಎಂದು ಹೇಳದೆ ಏಫಿಯಿಲ್ಲ. ಅಲ್ಲಿ ಸುಮಾರು ಒಂದು 8-10 ಕುಟುಂಬದವರು 40-50 ಜನರು ಇದ್ದಾರೆ. ಅವರು ಎಲ್ಲಿಗೆ ಹೋಗಬೇಕು. ಪುನರ್‌ವಸತಿ ಮಾಡದೆ ಕೆಲಸ ಪ್ರಾರಂಭ ಮಾಡಿದರೆ ಇದರಿಂದ ಬಹಳ ಅನ್ಯಾಯವಾಗುತ್ತದೆಂದು ಈ ಸಮಯದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ 5—6 ಸಾವಿರ ಜನರ ಸಮಸ್ಯೆ ಇರುವುದರಿಂದ ಇವಕ್ಕೆ ಒಂದು ಯೋಜನೆ ಹಾಕಿಕೊಂಡು ಇವರಿಗೆ ಯಾವ ಜಮೀನನ್ನು ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡಬೇಕೆಂದು ಈ ಸಮಯದಲ್ಲಿ ಇನ್ನೊಂದು ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ನಮ್ಮ ಶಿವಮೊಗ್ಗದಲ್ಲಿ ತುಂಗಭದ್ರಾ ಶುಗರ್ ಫ್ಯಾಕ್ಟರಿಗೆಂದು ಒಂದು ಕಂಟ್ರಾಕ್ಟ್ ಬೇಸಿಸ್ ಮೇಲೆ ಸುಮಾರು 5 ಸಾವಿರ ಎಕರೆ ಜಮೀನನ್ನು ಕೊಟ್ಟಿದ್ದೇವೆ. ಆದರೆ ಅಲ್ಲಿ ಶುಗರ್ ಫ್ಯಾಕ್ಟರಿ ಮಾಡಬೇಕೆಂದ ಒಪ್ಪಂದ ಮಾಡಿಕೊಂಡು ಅದನ್ನು ಬಿಡಲಾವಣ್ ಮಾಡಿ ಮುಖೇಶ್ ಜೆಕ್ಸ್‌ಚ್ಯೆಲ್ಸ್ ಕಂಪನಿ ಮಾಡಿದ್ದಾರೆ. ಆದ್ದರಿಂದ ಅವರು ಯಾವ ಒಪ್ಪಂದ ಮಾಡಿಕೊಂಡಿದ್ದರೋ ಅದನ್ನು ನಡೆಸದೆ ಇದ್ದದ್ದರಿಂದ ಕೊಟ್ಟಿರತಕ್ಕ ಜಮೀನನ್ನು ವಾಪಸ್ ಪಡೆದುಕೊಳ್ಳಲು ತಮಗೆ ಯಾವ ನಿರ್ಭಂದವೂ ಇಲ್ಲ. ಅದನ್ನು ತಾವು ವಾಪಸ್ ತೆಗೆದುಕೊಂಡು ನೊಂದ ಜನರಿಗೆ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಇವತ್ತು ನಮ್ಮಲ್ಲಿ ಅರಣ್ಯ ಇಲಾಖೆಯವರು ಫಾರೆಸ್ಟ್ ಜಮೀನಿನಲ್ಲಿ ನೀಲಗಿರಿ ಮರಗಳನ್ನು ಹಾಕುತ್ತಿದ್ದಾರೆ. ಅದು ಪತಕ್ಕೆಂದರೆ ಹರಿಹರ ಪಾಲಫ್ಯಬರ್ ಕಾರ್ಖಾನೆಗೆ ಹಿಂದಿನ ಸರ್ಕಾರದವರು ಮಾಡಿಕೊಂಡು ಒಪ್ಪಂದವನ್ನು ಪೂರ್ತಿಮಾಡಲಿಕ್ಕೆ ನಮ್ಮ ಮಲೆನಾಡಿನ ಗದ್ದೆ ಅಚಿಗೂ ಮರಗಳನ್ನು ನೆಡುತ್ತಿದ್ದಾರೆ. ಆದರಿಂದ ಗದ್ದೆಯ ತೇವವನ್ನು ಹೀರಿಕೊಳ್ಳುತ್ತದೆ ಮತ್ತು ಅದರಿಂದ ರೈತರಿಗೆ ತೊಂದರೆಯೂ ಕೂಡಾ ಇದೆ. ಆ ಮರಗಳನ್ನು ಕಡಿದು ಒಂದು ಟನ್‌ಗೆ ಕೇವಲ 25 ರೂಪಾಯಿಗೆ ಕೊಡುತ್ತಿದ್ದಾರೆ. ಇವತ್ತು ಕಟ್ಟಿಗೆ ಒಂದು ಟನ್‌ಗೆ ಸುಮಾರು 600—700 ರೂಪಾಯಿಯಾಗುತ್ತದೆ. ಇದು ಯಾವ ನ್ಯಾಯವೆಂದು ಕೇಳುತ್ತೇನೆ. ದಯವಾಡಿ ನೊಂದ ಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜಧನವನ್ನೇ ರದ್ದುಮಾಡಿದ ಮೇಲೆ ಇದು ಯಾವುದೊ ಒಂದು ಒಪ್ಪಂದವನ್ನು ಮುರಿಯಲಿಕ್ಕೆ ಏಕೆ ಸಾಧ್ಯವಿಲ್ಲ ವೆಂದು ಕೇಳುತ್ತೇನೆ. ದಯವಾಡಿ ಮಲೆನಾಡಿನ ಜನರು ಶಾಂತಿಯಿಂದ ಜೀವನ ಮಾಡಲಿಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Matter under Rule 312

re. Postponement of the P.U.C. Examination.

ಅಧ್ಯಕ್ಷರು.—ಮಾನ್ಯ ಶಾಮಣ್ಣನವರೇ ನಾವು ಏನು ನಿಲುವಳಿ ಸೂಚನೆ ಕಳ್ಳಹಿಸಿಕೊಟ್ಟಿದ್ದಿರಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ಅವರು ಒಂದು ಸ್ಟೇಟ್‌ಮೆಂಟ್ ಮಾಡುತಾರೆ.

ಶ್ರೀ ಟಿ. ಆರ್. ಶಾಮಣ್ಣ.—ಅವರು ಸ್ಟೇಟ್‌ಮೆಂಟ್ ಮಾಡಲಿಕ್ಕೆ ಮೊದಲು ನಾನು ಒಂದೆರಡು ಮಾತುಗಳನ್ನು ಅವರ ಗಮನಕ್ಕೆ ತರುತ್ತೇನೆ.

ನನ್ನಾನ್ಯ ಸಭಾಧ್ಯಕ್ಷರೇ, ಈಗ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಪ್ರೀ ಯೂನಿವರ್ಸಿಟಿ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಬಹಿರಂಗವಾಗಿ ಅದರಿಂದ ಸುಮಾರು ಒಂದೂವರೆ ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಪರೀಕ್ಷೆಗಳು ಪ್ರಾರಂಭವಾದ ಎರಡನೇ ದಿನವೇ ಅನೇಕರಿಗೆ ಪರೀಕ್ಷೆ ಪ್ರಶ್ನೆಪತ್ರಿಕೆಗಳು ತಿಳಿದದ್ದು ಒಂದು. ಎರಡನೇಯದಾಗಿ ನನಗೆ ಒಬ್ಬ ವಿದ್ಯಾರ್ಥಿ ಕಾಗದ ಬರೆದಿದ್ದಾನೆ ಅವರಲ್ಲಿ ಎಲ್ಲಾ ಪ್ರಶ್ನೆಪತ್ರಿಗಳು ಸಿಕ್ಕುತ್ತಿರುವುದರಿಂದ ನ್ಯಾಯಯುತವಾಗಿ ಓದಿ ಪಾಸಾಗಲು ಕಷ್ಟಪಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ, ಇದನ್ನು ವಿಧಾನಸಭೆಯಲ್ಲಿ ಸಂಬಂಧಪಟ್ಟವರ ಗಮನಕ್ಕೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆಂದು ಹೇಳಿದ್ದಾನೆ. ಈ ರೀತಿ ಘೆಂಟಾಘೋಷವಾಗಿ ಹಿಂದೆ ಯಾವತ್ತೂ ಈ ರೀತಿ ನಡೆದಿರಲಿಲ್ಲ

ಒಂದೆರಡು ಪತ್ರಿಕೆಗಳು ಹಿಂದೆ ಒಂದು ಸಾರಿ ಪ್ರಕಟವಾಗಿದ್ದವು. ಒಂದು ಸಂಗತಿ ಏನೆಂದರೆ ಯೂನಿವರ್ಸಿಟಿ ವ್ಯವಹಾರದಲ್ಲಿ ಸರ್ಕಾರ ಪ್ರವೇಶ ಮಾಡುವುದಿಲ್ಲವೆಂದರೆ ಈ ಸಂದರ್ಭದಲ್ಲಿ ಅನ್ಯಾಯವಾಗಿ ಹುಡುಗರಿಗೆ ಎಷ್ಟು ತೊಂದರೆಯಾಗಿದೆ ಎನ್ನುವುದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಪರೀಕ್ಷೆಗಳನ್ನು ನಡೆಸಬೇಕಾದರೆ ಎಷ್ಟು ಲಕ್ಷರೂಪಾಯಿ ಖರ್ಚಾಗುತ್ತದೆ, ವಿದ್ಯಾರ್ಥಿಗಳಿಗೆ ಎಷ್ಟು ಕಾತರತೆ ಇರುತ್ತದೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಈರೀತಿ ಆಗಲೂ ಏನು ಕಾರಣ, ಯಾರು ಕಾರಣ ಎಂಬುದನ್ನು ಕಂಡುಹಿಡಿದು ಯಾರು ಇದಕ್ಕೆ ಹೊಣೆಗಾರರೋ ಅವರನ್ನು ಉಗ್ರ ಶಿಕ್ಷೆಗೆ ಗುರಿ ಮಾಡದೆ ಹೋದರೆ ಇದು ಇನ್ನು ಮುಂದೆಯೂ ಅವಾಹತವಾಗಿ ನಡೆಯುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಇನ್ನೊಂದು ವಿಷಯವೇನೆಂದರೆ. ಟ್ಯಾಬ್ಯುಲೇಷನ್‌ನಲ್ಲಿ ಕೂಡ ಇದೇರೀತಿ ಅವ್ಯವಸ್ಥೆಗಳು ನಡೆದು ಕೆಲವರು ಸಿಕ್ಕಿಹಾಕಿಕೊಂಡಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಾಗಿಲ್ಲ. ನಿಜವಾಗಿ ಮಾರ್ಕ್ಸ್ ಕಾರ್ಡಿನಲ್ಲಿ 25ಕ್ಕೆ 4ನ್ನು ಮಾಡಿ 40 ಇದ್ದದ್ದನ್ನು 58ನ್ನು ಮಾಡುವುದು ಈ ರೀತಿ ಬಹಳ ಅನ್ಯಾಯಗಳು ನಡೆದಿವೆ. ಆದರೂ ಆದರಲ್ಲಿ ತಪ್ಪಿತಸ್ಥರು ಇನ್ನೂ ಲೆಕ್ಚರರ್‌ಗಳಾಗಿ ಮುಂದುವರಿಯುತ್ತಿದ್ದಾರೆ. ತಾವು ಇದನ್ನು ಯೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಯಾರು ಕಾರಣರೆಂದು ಕಂಡುಹಿಡಿದು ಇದು ಮತ್ತೆ ಪುನರಾವೃತ್ತಿ ಆಗದಂತೆ ನೋಡಿಕೊಳ್ಳಬೇಕು ಇದು ಬೋರ್ಡಿನಲ್ಲಿ ನಡೆದಿದೆಯೇ ಪ್ರಿಂಟಿಂಗ್‌ನಲ್ಲಿ ನಡೆದಿದೆಯೇ ಅಥವಾ ಡಿಸ್ಟ್ರಿಬ್ಯೂಷನ್ ಲೆವೆಲ್‌ನಲ್ಲಿ ನಡೆದಿದೆಯೇ ಎಂಬುದನ್ನು ಪತ್ತೆ ಮಾಡಿ ಈ ಲೋಪಗಳನ್ನು ಸರಿಪಡಿಸದೆ ಹೋದರೆ ಪರೀಕ್ಷೆಯ ಪಾವಿತ್ರ್ಯತೆ ಇರುವುದಿಲ್ಲ ಇದನ್ನು ಲಘುವಾಗಿ ತೆಗೆದುಕೊಳ್ಳದೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಯಾರೇ ತಪ್ಪಿತಸ್ಥರಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಕೆಲವು ಅಧಿಕಾರಿಗಳು ಸಾವಿರಾರು ರೂಪಾಯಿ ಟ್ರಾವೆಲಿಂಗ್ ಚಾರ್ಜ್‌ಗಳನ್ನು ತೆಗೆದುಕೊಂಡಿದ್ದಾರೆ, ತೆಗೆದುಕೊಳ್ಳುತ್ತಿದ್ದಾರೆ. ಆದರಿಂದ ಯಾರೇ ತಪ್ಪಿತಸ್ಥರು ಇದ್ದರೂ, ಅದರಲ್ಲಿ ತಮ್ಮದು ಏನಾದರೂ ತಪ್ಪು ಇದ್ದರೂ ಸಹ ಅದಕ್ಕೆ ಶಿಕ್ಷೆಗೆ ಒಳಗಾಗಬೇಕು ಎಂದು ಹೇಳಿ ಮತ್ತೆ ಯಾವರೀತಿಯಿಂದಲೂ ಇದು ಪುನರಾವರ್ತನೆಯಾಗದಂತೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Statement by the Minister for University Education

re. Leakage of PUC. Question papers and re-examinations

5-00 P.M.

SRI S. M. YAHYA (Minister for University Education and Wakfs).- I would like to make the following statement:

"There has been a leakage of question papers of both first and second year Pre-University Education Examination. The Leakage was noticed when an anonymous letter enclosing a question paper was received by Post before the examination was due to be held. This was confirmed when a second question paper was similarly received. The Corps of Detectives has been ordered to investigate the matter and submit a report to Government as to how and to what extent the leakage took place. Its report is awaited.

The P.U.C. re-examination will start on 22nd April and end on 20th May 1977. From 22nd April to 28th April the time-table of examination remains the same. From 29th onwards there will be changes to cover the entire scheme of examinations within the short possible time."